

# ಕೆ.ಎಲ್.ಇ. ಸಂಸ್ಥೆಯ

## ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ

**ನ್ಯಾಕ್‌ನಿಂದ ಎ+ ಗ್ರೇಡ್ ಮಾನ್ಯತೆ ಪಡೆದಿದೆ**

## ಮಾದಕ ವಸ್ತುಗಳ ಹಾಗೂ ಮನೋದ್ರೇಕಕಾರಿ ಪದಾರ್ಥಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮ

ಧಾರವಾಡದ ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಮಹಾವಿದ್ಯಾಲಯದ ಐ.ಕ್ಯೂ.ಎ.ಸಿ. ಅಡಿಯಲ್ಲಿ ಯುತ್ ರೆಡ್‌ಕ್ರಾಸ್ ಘಟಕ ಹಾಗೂ ಕರ್ನಾಟಕ ಸರಕಾರದ ಅಬಕಾರಿ ಇಲಾಖೆ ಸಹಯೋಗದಲ್ಲಿ ದಿನಾಂಕ: 28/05/2025ರಂದು ನಡೆದ **“ಮಾದಕ ವಸ್ತುಗಳ ಹಾಗೂ ಮನೋದ್ರೇಕಕಾರಿ ಪದಾರ್ಥಗಳ ಸೇವನೆಯಿಂದಾಗುವ ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮ”**ದಲ್ಲಿ ಅತಿಥಿಗಳಾದ ಶ್ರೀ ಶಿವಾನಂದ ರಾಹುತರ್, ನಿರೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಧಾರವಾಡ ಜಿಲ್ಲೆ ಇವರು ಮಾದಕ ವಸ್ತುಗಳ ಸೇವನೆಯಿಂದ ಕ್ಷಣಿಕ ಸುಖ ಇವುಗಳಿಂದ ಆರೋಗ್ಯ, ಕುಟುಂಬ, ಸಮಾಜ ಮುಂತಾದವುಗಳ ಮೇಲೆ ಪರಿಣಾಮ ಬೀರುತ್ತವೆ. ಇವುಗಳ ಸೇವನೆಯಿಂದ 2015ರಲ್ಲಿ ಆತ್ಮಹತ್ಯೆ ಪ್ರಮಾಣ 100 ಇದ್ದು, 2019ರಲ್ಲಿ 1230ರಷ್ಟು ಹೆಚ್ಚಾಗಿದೆ. ಸರಾಸರಿ ದಿನನಿತ್ಯ ಮೂರುಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಕಂಡುಬರುತ್ತಿದೆ.

ನಾರ್ಕೋಟೆರಿರಿಜಮ್ ಎಂಬ ಭಯಾನಕ ಸಂಘಟನೆಗಳು ಹುಟ್ಟಿಕೊಂಡು ದೇಶದ್ರೋಹ ಕಾರ್ಯದಲ್ಲಿ ಸಕ್ರಿಯಗೊಂಡಿವೆ. ಯುವಕರನ್ನು ಮಾದಕ ವ್ಯಸನಿಗಳನ್ನಾಗಿ ಮಾಡಿ ಅದರಿಂದ ಬಂದ ಹಣದಿಂದ ಆಯುಧಗಳನ್ನು ಖರೀದಿಸಿ ದೇಶದ್ರೋಹ ಕೃತ್ಯಗಳನ್ನು ಮಾಡುತ್ತಿದ್ದಾರೆ. ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ಮಯನ್ಮಾರ್ ದೇಶಗಳಲ್ಲಿ ಮಾದಕ ಬೆಳೆಯುವ ಬಗ್ಗೆ ಮಾಹಿತಿ ಮತ್ತು ಪಂಜಾಬ ಮತ್ತು ಛತ್ತಿಸಗಡದಂತ ರಾಜ್ಯಗಳಲ್ಲಿ ಇವುಗಳ ಹೆಚ್ಚಾದ ಬಳಕೆಯ ಮಾಹಿತಿ ನೀಡಿದರು. ಗಾಂಜಾ, ಓಪಿಮ್, ಕೋಕೇನ್‌ಗಳ ಬಗ್ಗೆ ಮಾಹಿತಿ ನೀಡಿ ಅವುಗಳಿಂದಾಗುವ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಿದರು.

ಮತ್ತೊಬ್ಬ ಅತಿಥಿಗಳಾದ ಶ್ರೀ ಸಂತೋಷ ಮಾದಕ ವಸ್ತುಗಳು ನಿಧಾನವಾಗಿ ನಮ್ಮನ್ನು ಆಕ್ರಮಿಸಿಕೊಳ್ಳುತ್ತಿವೆ, ಅವುಗಳಿಗೆ ಆಸ್ಪದ ನೀಡದೆ ಜಾಗೃತಿ ಮೂಡಿಸಬೇಕಾಗಿದೆ. ಇದರಿಂದ ಈ ವ್ಯಸನಗಳನ್ನು ಸಮಾಜದಿಂದ ನಾವೆಲ್ಲರೂ ಹೊಡೆದೋಡಿಸಬೇಕೆಂದರು.

ಕಾರ್ಯಕ್ರಮದಲ್ಲಿ ಪೋಲೀಸ್ ಪೇದೆ ಶಿವಾನಂದ ತಡವಲ, ಸಿಬ್ಬಂದಿ ವರ್ಗ, ಸ್ವಯಂ ಸೇವಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ನೀಲಕ್ಕ ಪಾಟೀಲ ಸ್ವಾಗತಿಸಿ, ಪರಿಚಯಿಸಿದರು. ಆಯ್. ಕ್ಯೂ.ಎ.ಸಿ. ಸಂಯೋಜಕರಾದ ಪ್ರೊ.ಶ್ರೀದೇವಿ ಸಂಗೊಳ್ಳಿ ವಂದಿಸಿದರು. ಯುತ್ ರೆಡ್ ಕ್ರಾಸ್ ಘಟಕದ ಅಧಿಕಾರಿಯಾದ ಡಾ. ಬಾಬು ಬೆಣ್ಣಿ ನಿರೂಪಿಸಿದರು.

# ಕೆ.ಎಲ್.ಇ. ಸಂಸ್ಥೆಯ

## ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ

ನ್ಯಾಕ್‌ನಿಂದ ಎ+ ಗ್ರೇಡ್ ಮಾನ್ಯತೆ ಪಡೆದಿದೆ

## ಮಾದಕ ವಸ್ತುಗಳ ಹಾಗೂ ಮನೋದ್ರೇಕಕಾರಿ ಪದಾರ್ಥಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮ







ಶ್ರೀ ಶಿವಾನಂದ ಬಿ. ರಾಹುತರ, ಇನ್‌ಸ್ಪೆಕ್ಟರ್, ಎಕ್ಸೈಸ್ ಡಿ.ಸಿ. ಸ್ಕ್ವಾಡ್, ಧಾರವಾಡ ಜಿಲ್ಲಾ ಕಛೇರಿ, ನವನಗರ, ಹುಬ್ಬಳ್ಳಿ ಇವರು ದಿನಾಂಕ:28/06/2025ರಂದು ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಮಹಾವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಅಬಕಾರಿ ಇಲಾಖೆ, ಧಾರವಾಡ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಮಾದಕ ವಸ್ತುಗಳ ಹಾಗೂ ಮನೋದ್ರೇಕಕಾರಿ ಪದಾರ್ಥಗಳ ಸೇವನೆಯಿಂದಾಗುವ ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಶ್ರೀ ಸಂತೋಷ ಹಾಗ್ಲೂ ಪೋಲೀಸ್ ಪೇದೆ ಶಿವಾನಂದ ತಡವಲರವರು ಉಪಸ್ಥಿತರಿದ್ದರು.